## ಫೈವ್‌ಮೈಲ್ಸ್

ಮೊಬೈಲ್ ಮೂಲಕ ಮಾರಾಟ ಹಾಗೂ ಖರೀದಿ ಮಾರುಕಟ್ಟೆಯನ್ನು ಒದಗಿಸುವ ಈ ಆ್ಯಪ್‌ನಿಂದ ರಿಯಲ್ ಎಸ್ಟೇಟ್, ಇತರ ಗ್ರಾಹಕ ವಸ್ತುಗಳ ಮಾರಾಟ ಮತ್ತು ಖರೀದಿ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಅವಕಾಶಗಳ ಬಗ್ಗೆ ಜಾಲಾಡಬಹುದು. ಇದು ಸ್ಥಳೀಯ ಮಾರುಕಟ್ಟೆಗೆ ಸೀಮಿತವಾಗಿದೆ. ಅಂದರೆ ಕ್ಲಾಸಿಫೈಡ್ಸ್ ತರಹ ಕೆಲಸ ಮಾಡುತ್ತದೆ. ಐಫೋನ್ ಹಾಗೂ ಆ್ಯಂಡ್ರಾಯ್ಡ್‌ನ ಈ ಉಚಿತ ಆ್ಯಪ್ ನಿಮ್ಮ ಅಕ್ಕಪಕ್ಕದಲ್ಲೇ ನಿಮಗೆ ಅಗತ್ಯವಿರುವ ಸೇವೆಗಳನ್ನು ಒದಗಿಸಬಲ್ಲದು. ಜೊತೆಗೆ ಅಪರಿಚಿತರ ಜೊತೆ ವ್ಯವಹರಿಸುವಲ್ಲಿ ಇರುವ ಭಯವನ್ನು ಹೋಗಲಾಡಿಸುತ್ತದೆ. ನಂಬಲರ್ಹವಾದುದು ಎಂಬ ಅನಿಸಿಕೆಯನ್ನು ಬಳಕೆದಾರರಲ್ಲಿ ಮೂಡಿಸುತ್ತದೆ. ಖಾತೆ ತೆರೆದ ಬಳಿಕ ಅದನ್ನು ಫೇಸ್‌ಬುಕ್, ನಿಮ್ಮ ಫೋನ್ ನಂಬರ್, ಇಮೇಲ್ ವಿಳಾಸ ಮೊದಲಾದವುಗಳಿಗೆ ಸಂಪರ್ಕ ಕಲ್ಪಿಸಬಹುದು.







## ಫೇಸ್‌ಬುಕ್ ಮೆಸೆಂಜರ್

ಆ್ಯಂಡ್ರಾಯ್ಡ್‌ನ ಈ ಹೊಸ ಸುಧಾರಿತ ಆ್ಯಪ್‌ನ ಸಮನ್ವಯಗೊಳಿಸಲ್ಪಟ್ಟ ಎಸ್‌ಎಂಎಸ್‌ನಿಂದಾಗಿ ನಿಮ್ಮ ಮೊಬೈಲ್‌ನಿಂದ ಸ್ನೇಹಿತರ ಜೊತೆ ಸಾಕಷ್ಟು ಸಮಯ ಸಂವಹನ ನಡೆಸಬಹುದು. ಸಿದ್ಧ ಸಂದೇಶಗಳನ್ನು ಕೂಡಾ ರವಾನಿಸಬಹುದು. ನೋಟಿಫಿಕೇಶನ್‌ಗಳನ್ನು ಕಳಿಸಲು ಸಾಕಷ್ಟು ಸೆಟಿಂಗ್‌ಗಳಿವೆ. ಸಂದೇಶಗಳು ಬಂದಾಗ ನಿಮ್ಮನ್ನು ಎಚ್ಚರಿಸುವ ಅಂಶಗಳೂ ಇದರಲ್ಲಿವೆ. ಹಳೆಯ ಆ್ಯಪ್‌ನಲ್ಲಿದ್ದ ಚ್ಯಾಟ್ ಅವಕಾಶವನ್ನು ಉಳಿಸಿಕೊಳ್ಳಲಾಗಿದೆ. ಮೂಲ ಫೇಸ್‌ಬುಕ್ ಆ್ಯಪ್‌ನಲ್ಲಿದ್ದಂತಹ ತತ್‌ಕ್ಷಣದ ಸಂದೇಶಗಳು ವೇಗವಾಗಿ ತಲುಪುತ್ತವೆ. ನಿಮ್ಮ ಫೇಸ್‌ಬುಕ್ ಸಂಪರ್ಕದಲ್ಲಿರುವ ಸ್ನೇಹಿತರ ನಂಬರ್‌ಗಳನ್ನು ಅವರು ಆನ್‌ಲೈನ್‌ನಲ್ಲಿದ್ದಾಗ ಹುಡುಕಿಕೊಳ್ಳುತ್ತದೆ.

## ಲಿಂಕ್ಡ್ ಇನ್

ವೃತ್ತಿಪರರು ಸೇರುವಂತಹ ಈ ಸಾಮಾಜಿಕ ಜಾಲತಾಣವು ಇದೀಗ ಆ್ಯಂಡ್ರಾಯ್ಡ್ ಆ್ಯಪ್‌ನಲ್ಲಿ ಲಭ್ಯ. ಉದ್ಯಮಕ್ಕೆ ಸಂಬಂಧಿಸಿದ ಬಾಂಧವ್ಯವನ್ನು ವೃದ್ಧಿಗೊಳಿಸಲು ಇದು ನೆರವು ನೀಡಲಿದೆ. ಜಾಲತಾಣವನ್ನು ನಿಮ್ಮ ಬೆರಳ ತುದಿಯಲ್ಲಿ ಸಂಪರ್ಕಿಸಿ ಮುಖ್ಯವಾದ ಮೀಟಿಂಗ್, ಸಮಾವೇಶ ಮೊದಲಾದವುಗಳಿಗೆ ಆರಾಮವಾಗಿ ಹೋಗಬಹುದು. ವೆಬ್‌ಸೈಟ್‌ನಂತೆ ಈ ಆ್ಯಪ್ ಅನ್ನು ಸಮಗ್ರವಾಗಿ ವಿನ್ಯಾಸಗೊಳಿಸಲಾಗಿದ್ದು, ಉದ್ಯಮಿ ಸ್ನೇಹಿತರ ವಲಯದಲ್ಲಾಗುವ ಬದಲಾವಣೆಗಳನ್ನು ತಿಳಿದುಕೊಳ್ಳಬಹುದು. ಇದನ್ನು ಅಳವಡಿಸಿಕೊಂಡಾಗ ನಿಮ್ಮ ಸಂಪರ್ಕಗಳ ಜೊತೆ ಸಿಂಕ್ ಮಾಡುತ್ತದೆ. ನಿಮ್ಮ ಪ್ರೊಫೈಲ್ ಅನ್ನು ಯಾರು ವೀಕ್ಷಿಸಿದ್ದಾರೆ, ತಾಜಾ ಸುದ್ದಿಗಳ ವಿವರ ಮೊದಲಾದವುಗಳನ್ನು ತಿಳಿದುಕೊಳ್ಳಬಹುದು.







## ಬ್ಯಾಟರಿ ಚಾರ್ಜ್

ಮೊಬೈಲ್ ಬ್ಯಾಟರಿ ಚಾರ್ಜ್ ಮಾಡುವಾಗ ಕೆಲವೊಂದು ಮಾನದಂಡಗಳನ್ನು ಅನುಸರಿಸಿದರೆ ನಿಮ್ಮ ಬ್ಯಾಟರಿ ಶೀಘ್ರವಾಗಿ ಚಾರ್ಜ್ ಆಗಬಲ್ಲದು. ಚಾರ್ಜ್ ಮಾಡುವಾಗ ಫೋನ್ ಆನ್ ಮಾಡಬೇಡಿ. ಇದರಿಂದ ಇಂಟರ್‌ನೆಟ್ ಹಾಗೂ ಆ್ಯಪ್‌ಗಳು ಚಾಲ್ತಿಯಲ್ಲಿ ಇರದೆ ಚಾರ್ಜ್ ಆಗಲು ದೀರ್ಘ ಸಮಯ ಬೇಕಾಗದು. ಜಿಪಿಎಸ್, ಎಸ್‌ಎಂಎಸ್ ಕೂಡಾ ಕೆಲಸ ಮಾಡುವುದಿಲ್ಲ. ಜೊತೆಗೆ ನಿಮ್ಮ ಮೊಬೈಲ್ ಜೊತೆ ಕೊಟ್ಟ ಉತ್ಕೃಷ್ಟವಾದ ಚಾರ್ಜರ್ ಅನ್ನೇ ಬಳಸಿ. ಕೇಬಲ್ ಕೂಡಾ ಅದರ ಜೊತೆಗೆ ಕೊಟ್ಟಿದ್ದೇ ಬಳಸಿ.

■ ಎಸ್. ತುಂಬೆ